



ಗುಂಡ ತನ್ನ ಹೆಸರಿನಲ್ಲಿ ಫೇಸ್‌ಬುಕ್‌ನ್ನು ಆರಂಭಿಸಿದ. ವಾಲ್ ಮೇಲೆ ಏನು ಬರೆಯಬೇಕೆಂದು ಅವನಿಗೆ ಹೊಳೆಯಲಿಲ್ಲ. ಕೊನೆಗೆ 'ಇಲ್ಲಿ ಮೂತ್ರ ವಿಸರ್ಜನೆ ಮಾಡುವವರಿಗೆ ಶಿಕ್ಷೆ ವಿಧಿಸಲಾಗುವುದು' ಎಂದು ಬರೆದ!

★★★

ಪ್ರಶ್ನೆ: ಇತ್ತೀಚೆಗೆ ಗಂಡಸರು ತಮ್ಮ ಪತ್ನಿಗಿಂತ ಹೆಚ್ಚಾಗಿ ಕಂಪ್ಯೂಟರ್‌ಗೆ ಅಂಟಿ ಕೊಂಡಿರುತ್ತಾರಲ್ಲ ಏಕೆ?

ಉತ್ತರ: ಏಕೆಂದರೆ ಅದರ ಕಂಟ್ರೋಲ್ ಕೀ ಅವರ ಕೈಯಲ್ಲೇ ಇರುವುದರಿಂದ.

**(ಸಂಗ್ರಹ) ಸಾವಿತ್ರಮ್ಮ ಕೆ.ವಿಭೂತಿ, ಹರಿಹರ**

ಗುಂಡ: ಎಲ್ಲವೂ ಹಣೆಬರಹದಿಂದಲೇ ಸಿಗುವುದಿದ್ದರೆ ನಾವು ಪ್ರಯತ್ನವೇಕೆ ಪಡಬೇಕು ಸ್ವಾಮೀಜಿ?

ಸ್ವಾಮೀಜಿ: ಪ್ರಯತ್ನಪಟ್ಟರೇ ಲಭಿಸುವುದೆಂದು ಹಣೆಬರಹದಲ್ಲಿ ಬರೆದಿದ್ದರೆ...!

★★★

ಪುಟ್ಟ: ಅಪ್ಪಾ, ಆದಷ್ಟು ಬೇಗ ನನ್ನ ಮದುವೆ ಮಾಡಿಸಿ.

ಅಪ್ಪ: ಯಾಕೋ ಪುಟ್ಟ?

ಪುಟ್ಟ: ನೀವು ಮಾಡಿಸಿಯಪ್ಪಾ, ಇಲ್ಲದಿದ್ದರೆ ನಾನು ಅಜ್ಜಿಯ ಜೊತೆ ಮದುವೆ ಮಾಡಿಕೊಳ್ಳುತ್ತೇನೆ.

ಅಪ್ಪ: ಏನು, ನೀನು ನನ್ನ ಅಮ್ಮನ ಜೊತೆ ಮದುವೆ ಮಾಡಿಕೊಳ್ಳುವೆಯಾ?

ಪುಟ್ಟ: ಹೌದು ಮತ್ತೆ, ನೀವು ಕೂಡಾ ನನ್ನ ಅಮ್ಮನ ಜೊತೆ ಮದುವೆ ಮಾಡಿಕೊಂಡಿಲ್ಲವೆ?

★★★

ಹವಾಮಾನ ವಾರ್ತೆ....

ಕಳೆದ 24 ಗಂಟೆಗಳಲ್ಲಿ ಸುರಿದ ಭಾರೀ ಮಳೆಯಿಂದಾಗಿ ಹುಡುಗಿಯರ ಮೇಕಪ್ ಪೂರ್ತಿ ಕರಗಿ ಹೋಗಿದೆ. ಪರಿಣಾಮವಾಗಿ ಮುಂದಿನ 24 ಗಂಟೆಗಳಲ್ಲಿ ಸೆಲ್ಫಿಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಂಡುಬರಲಿದೆ!

★★★

ಸಂಸ್ಥೆಯೊಂದರಲ್ಲಿ ಆರೋಗ್ಯ ತಪಾಸಣೆಯ ವೇಳೆ ಇಬ್ಬರು ನೌಕರರಿಗೆ ರಕ್ತದೊತ್ತಡ ಮತ್ತು ಮಧುಮೇಹದ ತೊಂದರೆ ಇಲ್ಲದಿರುವ ಅಂಶ ಬೆಳಕಿಗೆ ಬಂತು.

ಮರುದಿನ ಅವರಿಬ್ಬರನ್ನು, ಶ್ರಮವಹಿಸಿ ಕಾರ್ಯ ನಿರ್ವಹಿಸುವುದಿಲ್ಲವೆಂಬ ಕಾರಣಕ್ಕೆ ನೌಕರಿಯಿಂದ ವಜಾ ಮಾಡಲಾಯಿತು.

★★★

ಗುಂಡ: ಈ ಸ್ಯಾಮ್‌ಸಂಗ್ ಜೆ ಮ್ಯಾಕ್ಸ್ ಮೊಬೈಲ್ ಬೆಲೆ ಎಷ್ಟು?

ಅಂಗಡಿಯಾತ: 16,500 ರೂಪಾಯಿ.

ಗುಂಡ: ಅಯ್ಯೋ ದೇವರೇ... ಅಷ್ಟೊಂದಾ?

ಸರಿ, ಈ ಐಫೋನಿನ ಬೆಲೆ ಎಷ್ಟು?

ಅಂಗಡಿಯಾತ: ಅಯ್ಯೋ ದೇವರೇ+ ಅಯ್ಯೋ ದೇವರೇ!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

ಅಪ್ಪ: ಡಾಕ್ಟ್ರೆ.. ನನ್ನ ಮಗನ ಕಂಡೀಷನ್ ಹೇಗಿದೆ?

ಡಾಕ್ಟರ್: ಪರವಾಗಿಲ್ಲ.. ನರ್ಸ್ ಬಂದ್ರೆ ಆಗಾಗ ಕಣ್ ಬಿಟ್ಟು ನೋಡ್ತಿರ್ತಾನೆ..

★★★

ನಿನ್ನೆ ರಾತ್ರಿ ಮಲಗಿದ್ದಾಗ ಕಾಲಿನ ಬಳಿ ತೆವಳುತ್ತಿದ್ದ ಹಾವಿನ ಬಾಲಹಿಡಿದು ನೆಲಕ್ಕೆ ಬಡಿದೆ.

ಲೈಟ್ ಹಾಕಿ ನೋಡಿದಾಗ

ಮೊಬೈಲ್ ಚಾರ್ಜರ್ ಎರಡು ತುಂಡಾಗಿ ಬಿದ್ದಿತ್ತು.

★★★



ಶಿಕ್ಷಕ: ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗದು.. ಇದೇ ರೀತಿ ಇನ್ನೊಂದು ಉದಾಹರಣೆ ಕೊಡು.

ಗುಂಡ: ಎಣ್ಣೆ ಬಿಟ್ಟು ನೀರಿನಲ್ಲಿ ಬೋಂಡ ಬೇಯದು.

★★★

ರಾಜ: ನೆನ್ನೆ ಯಾಕೋ ತುಂಬಾ ಬೇಜಾರಾಗಿದ್ಯಲ್ಲೋ?

ಗುಂಡ: ನೆನ್ನೆ ನನ್ನ ಹೆಂಡತಿ 10,000ರೂಪಾಯಿ ಸೀರೆ ತಗೊಂಡ್ಳು.

ರಾಜ: ಮತ್ತೆ ಇವತ್ತೇಕೆ ಫುಲ್ ಖುಷ್ ಇದ್ದೀಯಲ್ಲಾ?

ಗುಂಡ: ಆ ಸೀರೇನಾ ನಿನ್ನ ಹೆಂಡತಿಗೆ ತೋರಿಸೋಕೆ ಹೋಗಿದ್ದಾಳೆ.

★★★

ಇಷ್ಟಪಟ್ಟವಳು ಸಿಕ್ಕರೆ ಹೆಂಡತಿಯಾಗ್ತಾಳೆ, ಹುಟ್ಟುವ ಮಗುವಿಗೆ ತಾಯಿಯಾಗ್ತಾಳೆ, ಜೀವವಿಮೆಗೆ ನಾಮಿನಿ ಆಗ್ತಾಳೆ.

ಸಿಗದಿದ್ದರೆ....

ಹುಟ್ಟುವ ಮಗುವಿಗೆ ಹೆಸರಾಗ್ತಾಳೆ, ಈಮೇಲ್ ಐಡಿಗೆ ಪಾಸ್ವರ್ಡ್ ಆಗ್ತಾಳೆ

**(ಸಂಗ್ರಹ) ಪ.ನಾ.ಹಳ್ಳಿ ಹರೀಶ್ ಕುಮಾರ್**